KAN 203.1

ಕ್ರೆಡಿಟ್ ಆಧಾರಿತ ಎರಡನೇ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ – ಎಪ್ರಿಲ್ 2016

ಕನ್ನಡ ಭಾಷಾಪತ್ರಿಕೆ

ಸಮಯ: 3 ಘಂಟೆ

ಅಂಕಗಳು: 80

I (ಅ) ಕೆಳಗಿನ ಪದ್ಯಭಾಗಗಳಲ್ಲಿ ಒಂದರ ಸಂದರ್ಭ, ಸ್ವಾರಸ್ಯವನ್ನು ವಿವರಿಸಿ. 5X1=05

(1) ಬಂದ ಸುಖವನು ಬಿಡದೆ ಬರದುದ ಬೇಕೆನದೆ
ದಂದುಗಂ ಬಿಡದೆ ಮನದೆಚ್ಚರವ ಬಿಡದೆ
ಸಂದುದನದೇಕೆನದೆ ಮುಂದದೇಂ ಗತಿಯೆನದೆ
ಹೊಂದಿಕೊಳೊ ಬಂದುದಕೆ ಮರುಳ ಮುನಿಯ

(2) ಇದಿರೆಳ್ದು ಪರಿದು ಕೈಕೆಯ
ಪದಾಂಬುಜಕ್ಕೆರಗೆ ರಾಘವಂ ಹರ್ಷದ ಭಾ
ರದಿನಾಸತಿಗುಮ್ಮಳಮಾ
ದುದು ಮನದೊಳ್ನೆನೆದು ತನ್ನ ಗೆಯ್ದನ್ನೆಯಮಂ

ಆ) ಕೆಳಗಿನ ಪದ್ಯದ ಸಾಲುಗಳಲ್ಲಿ ಎರಡರ ಸಂದರ್ಭ ಸಹಿತ ವಿವರಿಸಿ 3X2=06

(1) ತವರ ಸಿರಿ ಬೆಳೆಯ ಬರಲಿ ನಮ್ಮಣ್ಣಗೆ
(2) ತನ್ನ ಹಿತಕಾಗಿ ಹೋರಾಡುವ
(3) ನಾಡಿಗೊಂದು ನುಡಿ ಜನ್ಮಸಿದ್ಧ ಹಕ್ಕು

ಇ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಪ್ರಬಂಧ ರೂಪದಲ್ಲಿ ಉತ್ತರಿಸಿರಿ 10X1=10

(1) ಇಷ್ಟವಿಲ್ಲದಿದ್ದರೂ ಭರತ ರಾಜ್ಯವನ್ನಾಳಲು ರಾಮನೊಂದಿಗೆ ಒಪ್ಪಿಕೊಳ್ಳಲು ಕಾರಣವೇನು? ವಿವರಿಸಿ.
(2) ದ್ರೌಪದಿ ಶ್ರೀಕೃಷ್ಣನಲ್ಲಿ ಮೊರೆಯಿಟ್ಟಾಗ ಕೃಷ್ಣ ನೀಡಿದ ಅಭಯಹಸ್ತವೇನು? ಅದರ ಪರಿಣಾಮವೇನಾಯಿತು? 'ಮಾಯದ ತೃಷ್ಣೆ' ಪದ್ಯಭಾಗದ ಆಧಾರದಿಂದ ವಿವರಿಸಿ.

ಈ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ 7X1=07

(1) 'ಹೊಂದಾಣಿಕೆಯೇ ಜೀವನ, ಸಹಬಾಳ್ವೆ' ಎಂಬುದನ್ನು ಡಿವಿಜಿಯವರ ಕಾವ್ಯದ ಆಧಾರದಲ್ಲಿ ನಿರೂಪಿಸಿ.
(2) ತವರೂರ ಮನಿ ನೋಡ ಬಂದೆ ಜನಪದಗೀತೆಯ ಆಶಯವೇನು?

ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಪ್ರಬಂಧ ರೂಪದಲ್ಲಿ ಉತ್ತರಿಸಿರಿ 10X1=10

(1) ಮರಸು ಕುಳಿತ ರಂಗಯ್ಯ ಹೆಬ್ಬುಲಿಯನ್ನು ಕಂಡು ಭಯಗೊಂಡ ಬಗೆಯನ್ನು ವಿವರಿಸಿ.
(2) 'ರಾಜಕೀಯ ಹಾಗೂ ನಾವು' ಲೇಖನದಲ್ಲಿ ರಾಜಕೀಯ ಪ್ರಜ್ಞೆಯ ಬಗ್ಗೆ ಅಡಿಗರ ನಿಲುವೇನು? ವಿವರಿಸಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ 7X1=07

(1) ಅಕ್ಷರ ಸಂತ ಹಾಜಬ್ಬರ ಯಶೋಗಾಥೆಯನ್ನು ನಿರೂಪಿಸಿ.
(2) ಪುಸ್ತಕ ಪ್ರಿಯರ ಆಸೆ, ಆಕಾಂಕ್ಷೆಗಳು ಹೇಗೆ ನಿವಾರಣೆಯಾಗುತ್ತವೆ? 'ಸೆಕೆಂಡ್ ಹ್ಯಾಂಡ್ ಪುಸ್ತಕ' ಲೇಖನದ ಆಧಾರದಿಂದ ಚರ್ಚಿಸಿ.

ಅ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಪ್ರಬಂಧ ರೂಪದಲ್ಲಿ ಉತ್ತರಿಸಿರಿ 10X1=10

(1) 'ಸಂಧಾನ' ನಾಟಕದ ಆಶಯವನ್ನು ಚರ್ಚಿಸಿ.
(2) ಕೃಷ್ಣನು ಕೌರವನ ಆಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭವನ್ನು ವಿವರಿಸಿ.

ಆ) ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ

(1) ಯುದ್ಧದ ಬಗೆಗೆ ಗಾಂಧಾರಿಯ ತಳಮಳವೇನು?

(2) ದಾಸಿಯರ ಸಂಭಾಷಣೆಯಲ್ಲಿ ಯುದ್ಧದ ಚಿತ್ರಣ

ಇ) ಕೆಳಗಿನ ಮೂರು ಸಾಲುಗಳಲ್ಲಿ ಎರಡರ ಸಂದರ್ಭ ಸೂಚಿಸಿ ಉತ್ತರಿಸಿರಿ

(1) ಅವನು ಬಂದರೆ ಸಂಧಾನ ಆದೀತು, ಯುದ್ಧ ತಪ್ಪೀತು.

(2) ನನ್ನ ಕುರುಡು ಶಾಶ್ವತ ಕುರುಡಾಗಲಿ.

(3) ಸಿಂಹಾಸನದಲ್ಲಿ ಕೂತೋರೆಲ್ಲ ನಿನ್ನ ಹಾಗೇನೆ ಮಾತಾಡೋದು.

IV ಅ) ಕೆಳಗಿನ ಪ್ರಶ್ನೆಗಳಲ್ಲಿ ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.

(1) ಕುವೆಂಪು

(2) ಡಿ.ವಿ.ಜಿ.

(3) ನಾಗಚಂದ್ರ

ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ/ಪದದಲ್ಲಿ ಉತ್ತರಿಸಿ

(1) ಪಂಪರಾಮಾಯಣಕ್ಕಿರುವ ಇನ್ನೊಂದು ಹೆಸರೇನು?

(2) 'ಮರುಳ ಮುನಿಯ' ಯಾವ ಕವಿಯ ಅಂಕಿತ ನಾಮ?

(3) ಅಡಿಗರ ಪೂರ್ಣ ಹೆಸರೇನು

(4) ಪಾಂಚಾಲಿ ಯಾರು?

(5) ಪಾಂಡವರು ಅಜ್ಞಾತವಾಸವನ್ನು ಎಲ್ಲಿ ಕೈಗೊಂಡರು?

(6) 'ಸಂಧಾನ' ನಾಟಕವನ್ನು ಬರೆದವರು ಯಾರು?

*****

KAN 202.1 Reg. No. ..................................

ಕ್ರೆಡಿಟ್ ಆಧಾರಿತ ದ್ವಿತೀಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ

ಏಪ್ರಿಲ್ 2014

ಕನ್ನಡ ಭಾಷಾ ಪತ್ರಿಕೆ – II

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

## ಭಾಗ – ೧ – ಕಾವ್ಯ

I. ಅ) ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ: 1x5=5

1) ಸೂತಕುಲ ಸಂಭವನೆ ಭುವನ
ಖ್ಯಾತ ಕರ್ಣನು ಸಾಕಿದಾತನು
ಸೂತನಾದೊಡೆ ಮಾವ ಕೇಳನ್ವಯಕೆ ಹಳಿವುಂಟೇ
ಸ್ವಾತಿಯುದಕದೊಳಾದ ಮುಕ್ತಾ
ವ್ರಾತಕಯ್ಯನೆ ಚಿಪ್ಪು ನಿಮಗಿ
ನ್ನೇತಕೀ ಸಂದೇಹ ರವಿಸುತದ ಸೂತನಲ್ಲೆಂದ

2) ಕೈಕೈಗಳ ಕುಲುಕಿಸಿ
ಎದೆಗೆದೆಯನು ಹಾಯಿಸಿ
ಭೇದವೆಲ್ಲ ಪುಟ್ಟುರಿವೊಲು ಎದೆಯೊಲವನು ಕೆರಳಿಸಿ,
ತೊಳತೊಳಗುವ ನರತೆಯೆಂಬ ಬಂಗಾರವನರಳಿಸಿ
ಯುವಜನವಿದೊ ನವಜನವಿದೊ ದುಡುಕುತಿಹುದು ಮುಂದಕೆ
ಪದಪದಕೂ ಯುಗಯುಗಗಳೆ ಸರಿಯುತಿರಲು ಹಿಂದಕೆ
ಒಮ್ಮತದೊಗ್ಗಟ್ಟಿನ ಒಬ್ಬಗೆ ಬಾಳಿನ ಚಂದಕೆ

ಆ) ಮೂರು ಸಾಲುಗಳ ಸಂದರ್ಭ ಸ್ವಾರಸ್ಯವನ್ನು ವಿವರಿಸಿ: 3x3=9

1) ಜಯಸಿರಿಯ ಸಂಧಾನ ಮುರಿದುದು ಮಾವ ನಿಮಗಜ್ಞಾತವೇನೆಂದ
2) ಬತ್ತೀಸರಾಗದ ಬಗೆಯ ನರಿಯದಂಥ ಕತ್ತಿಗಿನ್ಯಾತಕೆ ತಂಬೂರಿ
3) ಊರೂರು ತಿರುಗಿದ ನನ್ನ ಬೀದಿ ನಾಟಕದ ನಕಲಿ ಗಾಂಧಿಯೆ
4) ನನ್ನನರಸಿ ಬಂದಿದೆ ಹುಚ್ಚು ಕೋಳಿಯ ಹಾಗೆ

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. 1x10=10

1) ಶಲ್ಯನು ಕರ್ಣನ ಸಾರಥಿಯಾಗಲು ಏಕೆ ನಿರಾಕರಿಸುತ್ತಾನೆ? ವಿಶ್ಲೇಷಿಸಿ.
2) ಎರಡು ಭೂರ್ಜಪತ್ರಗಳು ಕವನದ ಆಶಯವೇನು? ವಿವೇಚಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ: 1x8=8

1) ಜಾತಿವ್ಯವಸ್ಥೆಯನ್ನು ಕುರಿತಾದ ಗೋಪಾಲಕೃಷ್ಣ ಅಡಿಗರ ನಿಲುವುಗಳನ್ನು ಕುರಿತು ವಿವೇಚಿಸಿರಿ.
2) ಲೈನ್‌ಮನ್ ಮಡಿವಾಳ ಭೀಮಪ್ಪನ ಸಮಾಜಮುಖಿ ವ್ಯಕ್ತಿತ್ವವು ಕವನದಲ್ಲಿ ಹೇಗೆ ಅಭಿವ್ಯಕ್ತವಾಗಿದೆ? ವಿಶ್ಲೇಷಿಸಿ.

## ಭಾಗ – ೨ – ಪ್ರಬಂಧ

II. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ: 1x10=10

1) ಅಮೇರಿಕಾದಲ್ಲಿರುವ ಜನಾಂಗಿಯ ಶೋಷಣೆಯನ್ನು ಪ್ರಬಂಧದಲ್ಲಿ ಹೇಗೆ ವಿವರಿಸಲಾಗಿದೆ? ವಿವೇಚಿಸಿ.
2) ನುಂಗಲಾರದ ತುತ್ತು ಪ್ರಬಂಧದಲ್ಲಿನ ವಿಸ್ಮಯಕಾರಿ ಸನ್ನಿವೇಶವನ್ನು ವಿಶ್ಲೇಷಿಸಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ: 1x8=8

1) ವಿಜ್ಞಾನ ಮತ್ತು ಕಾಲ್ಪನಿಕತೆಯನ್ನು 'ರತ್ನಗರ್ಭಾವಸುಂದರಾ' ಪ್ರಬಂಧದಲ್ಲಿ ಹೇಗೆ ಬಳಸಲಾಗಿದೆ? ವಿವರಿಸಿ.

2) ಕನ್ನಡ ಮೌಲ್ವಿಯ ಸಜ್ಜನಿಕೆಯ ವ್ಯಕ್ತಿತ್ವವನ್ನು ಲೇಖಕರು ಹೇಗೆ ಅನಾವರಣಗೊಳಿಸಿದ್ದಾರೆ? ವಿಶ್ಲೇಷಿಸಿ.

## ಭಾಗ – ೪ – ನಾಟಕ

III. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ: 1x10=10

1) ಮಂಥರೆಯ ಅಂತರಂಗದ ತುಮುಲವನ್ನು ನಾಟಕದಲ್ಲಿ ಹೇಗೆ ವಿಭಿನ್ನವಾಗಿ ಚಿತ್ರಿಸಲಾಗಿದೆ? ವಿಶ್ಲೇಷಿಸಿ.

2) ದಶರಥ ಮತ್ತು ಕೈಕಯಿಯ ನಡುವಿನ ಸಂಭಾಷಣೆಯ ಮಹತ್ವವೇನು? ಇದು ನಾಟಕದಲ್ಲಿ ಹೇಗೆ ಅಭಿವ್ಯಕ್ತವಾಗಿದೆ? ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ: 1x7=7

1) ಭರತನ ಪಾತ್ರವು ನಾಟಕದಲ್ಲಿ ಹೇಗೆ ಅನಾವರಣಗೊಂಡಿದೆ? ವಿವೇಚಿಸಿ.

2) ನಾಟಕದಲ್ಲಿ ಜನಪದ ಭಾಷೆ ಮತ್ತು ಗಾದೆ ಮಾತುಗಳನ್ನು ಹೇಗೆ ಬಳಸಲಾಗಿದೆ? ವಿವರಿಸಿ.

IV. ಅ) ಎರಡು ಪ್ರಶ್ನೆಗಳಿಗೆ ಟಿಪ್ಪಣಿ ರೂಪದಲ್ಲಿ ಉತ್ತರಿಸಿ: 2x4=8

1) ನಳಕೂಬರ

2) ಕುಮಾರವ್ಯಾಸ

3) ತಂಬೂರಿ

ಆ) ಪ್ರತಿಯೊಂದಕ್ಕೂ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ. 5x1=5

1) ಶಲ್ಯ ಯಾವ ದೇಶದ ರಾಜ?

2) 'ಕನ್ನಡ ಭಾರತ ಕಥಾಮಂಜರಿ' ಇದನ್ನು ಬರೆದವರು ಯಾರು?

3) ಅಮೇರಿಕಾದ ಅಧ್ಯಕ್ಷರ ಕಛೇರಿ ಇರುವ ಕಟ್ಟಡವನ್ನು ಯಾವ ಹೆಸರಿನಿಂದ ಕರೆಯುತ್ತಾರೆ?

4) 'ಕಂಸಾಯಣ' ಇದು ಯಾರು ಬರೆದ ನಾಟಕ?

5) ಗೊರೂರು ರಾಮಸ್ವಾಮಿ ಅಯ್ಯಂಗಾರರ ಅಮೇರಿಕಾ ಪ್ರವಾಸ ಕಥನದ ಹೆಸರೇನು?

**********

KAN 202.1 Reg. No. ..............................

# ಕ್ರೆಡಿಟ್ ಆಧಾರಿತ ದ್ವಿತೀಯ ಸೆಮಿಸ್ಟರ್ ಬಿ.ಎ./ಬಿ.ಎಸ್.ಡಬ್ಲ್ಯು. ಪದವಿ ಪರೀಕ್ಷೆ

## ಏಪ್ರಿಲ್ 2013

## ಕನ್ನಡ ಭಾಷಾ ಪತ್ರಿಕೆ - II

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ. 1 x 5 = 5

1) ಒಣಗುತಿದೆ ಕುರುವಂಶಲತೆ ಫಲು
ಗುಣನ ಕೋಪಾನಲನ ನಾಲಗೆ
ಕೆಣಕುತಿದೆ ಕಕ್ಕುಲತೆ ಪಟ್ಟೊಡೆ ಕಾಣೆ ಕಾವವರ।
ಅಣಕಿಸದೆ ಕಾರುಣ್ಯವರ್ಷವ
ನೊಣಗಲಲಿ ಸುರಿ ಪಾಪಿ ಮಕ್ಕಳ
ಹೆಣನ ಕಾಣುತ ದುಃಖವಿಲ್ಲವೆ ಮಾವ ನಿಮಗೆಂದ

2) ಗಾಂಧಿಯೊಟ್ಟಿಗೆ ನಿಮ್ಮನ್ನೂ ತೂಗುಹಾಕಿದ್ದಾರೆ ಗೋಡೆಗಳಿಗೆ
ನಿಮ್ಮ ಹೆಸರನ್ನು ಇಟ್ಟಿದ್ದಾರೆ ಪಟ್ಟಣದ ರೋಡುಗಳಿಗೆ
ಎಲ್ಲರೂ ನಿಮ್ಮ ದಾರಿಯನ್ನು ತುಳಿಯುತ್ತಿದ್ದಾರೆ?
ಜಾಡಮಾಲಿಗಳು ಎಂದಿನಂತೆ ತೊಳೆಯುತ್ತಿದ್ದಾರೆ

ಆ) ಎರಡು ಸಾಲುಗಳ ಸಂದರ್ಭ ಸ್ವಾರಸ್ಯವನ್ನು ವಿವರಿಸಿ. 2 x 3 = 6

1) ಕೆಟ್ಟಗಂಟಿ ಚೌಡೇರು ಬಂದು ಉಟ್ಟುದನ್ನೆ ಕದ್ದಾರು ಜೋಕೆ!
2) ಹೊಸಬಾಳಿನ ಹೊಸ ಸಮತೆಯ ಸಮರಸವನು ಸವೆವೆವು
3) ನನ್ನ ನಿನ್ನ ಬೆಳಕು ಮನೆ ಮಾರಾಟವಾಗಿದೆ

ಇ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ. 1 x 10 = 10

1) ಜಾತಿ–ಮತ ಮುಕ್ತವಾದ ಮಾನವ ಸಮಾಜ ನಿರ್ಮಾಣದ ಆಶಯವನ್ನು ಅಡಿಗರು ಹೇಗೆ ಪ್ರತಿಪಾದಿಸಿದ್ದಾರೆ?
2) ಎರಡು ಭೂರ್ಜಪತ್ರಗಳು ಕವನವು ವರ್ತಮಾನದ ಸ್ತ್ರೀಸಂವೇದನೆಗಳನ್ನು ಹೇಗೆ ವಿಶ್ಲೇಷಿಸುತ್ತದೆ? ವಿವರಿಸಿ.

ಈ) ಒಂದು ಪ್ರಶ್ನೆಗೆ ಉತ್ತರ ಬರೆಯಿರಿ. 1 x 8 = 8

1) ಮಾನವ ಬದುಕಿನ ಅರ್ಥಪೂರ್ಣತೆಯ ಸಂಕೇತವಾಗಿ ತಂಬೂರಿಯನ್ನು ಹೇಗೆ ಅರ್ಥೈಸಬಹುದು? ವಿವೇಚಿಸಿ.
2) ಮಡಿವಾಳರ ಭೀಮಪ್ಪನ ಸಾವು ಕವಿಯ ಮನಸ್ಸನ್ನು ಅಷ್ಟು ಗಾಢವಾಗಿ ಕಾಡಲು ಕಾರಣಗಳೇನು? ವಿವರಿಸಿ.

### ಪ್ರಬಂಧ

II. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ. 1 x 10 = 10

1) 'ಅಮೇರಿಕಾವನ್ನು ಯಾವ ನೆಲೆಯಲ್ಲಿ ಬದಲಿಸಬೇಕೆಂಬ ಆಶಯವನ್ನು ಮುಜಾಫರ್ ಅಸ್ಸಾದಿಯವರು ವ್ಯಕ್ತಪಡಿಸಿದ್ದಾರೆ? ವಿವರಿಸಿ.
2) ರತ್ನಗರ್ಭಾ ವಸುಂಧರಾದಲ್ಲಿ ಲೇಖಕಿಯ ಕಲ್ಪನಾ ಶಕ್ತಿ ಹೇಗೆ ವ್ಯಕ್ತಗೊಂಡಿದೆ? ವಿವೇಚಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 1 x 8

1) ಪ್ರಕೃತಿಯ ವಿಸ್ಮಯವು 'ನುಂಗಲಾರದ ತುತ್ತು' ಲೇಖನದಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿ.
2) ಕನ್ನಡ ಮೌಲ್ವಿ ಪ್ರಬಂಧದ ಪ್ರಮುಖ ಆಶಯವೇನು? ವಿವೇಚಿಸಿ.

ಇ) ಒಂದಕ್ಕೆ ಟಿಪ್ಪಣಿ ಬರೆಯಿರಿ. 1 x 3

1) ಪೂರ್ಣಚಂದ್ರ ತೇಜಸ್ವಿ
2) ಸತೀಶ್ ಕುಲಕರ್ಣಿ

## ನಾಟಕ

III. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ. 1 x 10 =

1) ಕೈಕಯಿಯ ಅಂತರಂಗದ ತುಮುಲದ ಸಂಘರ್ಷಕ್ಕೆ ಮಂಥರೆ ಹೇಗೆ ಕಾರಣಗಳಾಗುತ್ತಾಳೆ? ವಿಶ್ಲೇಷಿಸಿ
2) ಭರತನ ಪಾತ್ರ ಚಿತ್ರಣ ನಾಟಕದಲ್ಲಿ ಹೇಗೆ ಮೂಡಿ ಬಂದಿದೆ? ವಿವೇಚಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. 1 x 6

1) ದಶರಥ ಮತ್ತು ಕೈಕಯಿ ನಡುವಿನ ವಾಗ್ವಾದವನ್ನು ನಾಟಕದಲ್ಲಿ ಹೇಗೆ ವಿಶ್ಲೇಷಿಸಲಾಗಿದೆ? ವಿವರಿಸಿ.
2) ರಾಮನ ಮೇಲೆ ನಿಜವಾಗಿಯೂ ಮಂಥರೆಗೆ ದ್ವೇಷಭಾವನೆ ಇತ್ತೆ? ನಾಟಕದ ಹಿನ್ನೆಲೆಯಲ್ಲಿ ವಿವೇಚಿ

ಇ) ಒಂದಕ್ಕೆ ಟಿಪ್ಪಣಿ ಬರೆಯಿರಿ. 1 x 3

1) ದಶರಥ
2) ಮಂಥರೆ

IV. ಅ) ಎರಡಕ್ಕೆ ಟಿಪ್ಪಣಿ ರೂಪದಲ್ಲಿ ಉತ್ತರಿಸಿ. 2 x 3

1) ಶಲ್ಯ
2) ಶಿಸುನಾಳ ಶರೀಫ
3) ಅಂಬೇಡ್ಕರ್

ಆ) ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ. 5 x 1

1) ಗದುಗಿನ ಬಾರತವನ್ನು ಬರೆದವರು ಯಾರು?
2) 'ಕಟ್ಟುವೆವು ನಾವು' ಇದು ಯಾರ ಕವನಸಂಕಲನ?
3) ಅಮೇರಿಕಾದ ಅಧ್ಯಕ್ಷರು ಇರುವ ಕಟ್ಟಡವನ್ನು ಯಾವ ಹೆಸರಿನಿಂದ ಕರೆಯುತ್ತಾರೆ?
4) ಚಿದಂಬರ ರಹಸ್ಯ ಇದು ಯಾರು ಬರೆದ ಕಾದಂಬರಿ?
5) ದಶರಥನ ಮಕ್ಕಳ ಹೆಸರೇನು?

*********************

KAN 202.1

Reg. No. ....................................

ಕ್ರೆಡಿಟ್ ಆಧಾರಿತ ದ್ವಿತೀಯ ಸೆಮಿಸ್ಟರ್ ಬಿ. ಎ. ಪದವಿ ಪರೀಕ್ಷೆ

ಏಪ್ರಿಲ್ 2012

ಕನ್ನಡ ಭಾಷಾ ಪತ್ರಿಕೆ

ಅವಧಿ: 3 ಗಂಟೆಗಳು

ಒಟ್ಟು ಅಂಕಗಳು: 80

I. ಅ) ಪದ್ಯಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ. 1x5=5

1) ಅಸುರವ ಬೆರಗೇಕೆ ನಮ್ಮೊಡ
ನೀಸು ಮಾತೇಕೆಮ್ಮ ರಕ್ಷಿಸು
ವಾಸೆಯುಂಟೇ ಮಾಡು ಮಾಣ್ಬುದು ಕರುಣವಿಲ್ಲದೊಡೇ
ವಾಸವಟ್ಟವೆ ನೋಡಿದನೆ ಲ-
ಕ್ಷ್ಮೀಶನವರಲಿ ಸೂತಕರ್ಮಾ
ಭ್ಯಾಸಿಯೇ ಮುರವೈರಿಯೆಂದನು ಕೌರವರಾಯ

ಅಥವಾ

2) ಜಾತಿಮತದ ಗುಹೆಗಳಿಂದ ಹೊರಬನ್ನಿರಿ ಬಯಲಿಗೆ,
ಕೃತಕ ತಿಮಿರದಾಳದಿಂದ ವಿಸ್ತಾರದ ಬೆಳಕಿಗೆ;
ಸೇರಿಕೊಳಿ, ಕೂಡಿಕೊಳಿ, ಮುನ್ನುಗ್ಗುವ ಸಾಲಿಗೆ,
ಕತ್ತಲೊಡನೆ ಹೂಡಿದ ಈ ಉತ್ಸಾಹದ ದಾಳಿಗೆ;
ಕೂಡಿಸಿರೆವೆ ಕೊರಲುಗಳನು ಹೊಸಬಾಳಿನ ಹಾಡಿಗೆ

ಆ) ಇವುಗಳಲ್ಲಿ ಎರಡಕ್ಕೆ ಸಂದರ್ಭ ಸಹಿತ ವಿವರಿಸಿ. 2×3=6

1) ಬಿದ್ದು ಇಲ್ಲಿ ಒದ್ದಾಡಿದರ ಎದ್ದು ಹ್ಯಾಂಗ ಹಿಂದಕ ಬರಲಿ?
2) ನನ್ನನರಸಿ ಬಂದಿದೆ ಮುಚ್ಚುಕೋಳಿಯ ಹಾಗೆ
3) ನಾಗರ ಹಾವಿನೊಡನಾಡಿದವ ನೀನು

ಇ) ಒಂದು ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ. 1x10=10

1) ಕರ್ಣನ ಸಾರಥಿಯನ್ನಾಗಿ ಶಲ್ಯನನ್ನು ದುರ್ಯೋಧನನು ಒಪ್ಪಿಸುವ ಸಂದರ್ಭವನ್ನು ಕವಿ ಹೇಗೆ ಚಿತ್ರಿಸಿದ್ದಾನೆ?
2) ಕವಿ ಮತ್ತು ಅಂಬೇಡ್ಕರ್ ನಡುವಿನ ಸಂವಾದದ ಸ್ವಾರಸ್ಯವನ್ನು ಚಿತ್ರಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷೇಪವಾಗಿ ಉತ್ತರಿಸಿರಿ. 1x8=8

1) ಸತ್ಯವನ್ನು ತಿಳಿಯುವುದು ಬಾಳಿನ ಉದ್ದೇಶವಾಗಬೇಕೆಂಬುದನ್ನು ಶಿಶುನಾಳ ಶರೀಫರು ಹೇಗೆ ಪ್ರತಿಪಾದಿಸಿದ್ದಾರೆ? ವಿಶ್ಲೇಷಿಸಿ.
2) ಹೊಸಬಾಳನ್ನು ಕಟ್ಟಲು ಯುವಕರಿಗೆ ಕವಿ ಅಡಿಗರು ಹೇಗೆ ಕರೆಕೊಡುತ್ತಾರೆ? ವಿವರಿಸಿ.

II. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ. 1x10=10

1) ಅಮೇರಿಕಾದ ನೀಗ್ರೋಗಳ ಹಾಗೂ ಭಾರತದ ದಲಿತರ ಸ್ಥಿತಿಗತಿಗಳನ್ನು ಒಟ್ಟೊಟ್ಟಿಗೆ ಮುಜಾಫರ್ ಅಸ್ಸಾದಿಯವರು ಹೇಗೆ ಅನಾವರಣಗೊಳಿಸಿದ್ದಾರೆ? ವಿಶ್ಲೇಷಿಸಿ.
2) ಈ ಪ್ರಕೃತಿಯು ವಿಸ್ಮಯಗಳ ಗಣಿ ಎಂಬುದನ್ನು ತೇಜಸ್ವಿಯವರ ಸುಂಗಲಾರದ ತುತ್ತು ಪ್ರಬಂಧ ಹೇಗೆ ಸಾಧರಪಡಿಸುತ್ತದೆ? ವಿವೇಚಿಸಿ.

ಆ) <u>ಒಂದು</u> ಪ್ರಶ್ನೆಗೆ ಉತ್ತರಿಸಿರಿ. 1x8=8

1) ಮನುಷ್ಯನ ವಿನಾಶಕಾರಿ ಮನೋಭಾವ ಮತ್ತು ಅದಕ್ಕೆ ಪರಿಹಾರವನ್ನು ನಳಿನಿ ಮೂರ್ತಿಯವರು ಹೇಗೆ ಸೂಚಿಸುತ್ತಾರೆ? ವಿವರಿಸಿ.

2) ಸಜ್ಜನಿಕೆಯ ಮಹತ್ವವನ್ನು ಕನ್ನಡದ ಮೌಲ್ವಿ ಪ್ರಬಂಧ ಹೇಗೆ ಎತ್ತಿ ಹಿಡಿಯುತ್ತದೆ? ವಿಶ್ಲೇಷಿಸಿ.

ಇ) ಒಂದಕ್ಕೆ ಟಿಪ್ಪಣಿ ಬರೆಯಿರಿ. 1x3=3

1) ಮುಜಾಫರ್ ಅಸಾದಿ

2) ನಳಿನಿ ಮೂರ್ತಿ

III. ಅ) <u>ಒಂದು</u> ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ. 1x10=10

1) ರಾಮಾಯಣಕ್ಕಿಂತ ಭಿನ್ನವಾದ ನೆಲೆಯಿಂದ ಮಂಥರೆಯ ಪಾತ್ರವನ್ನು ನಾಟಕದಲ್ಲಿ ಹೇಗೆ ಕಟ್ಟಿಕೊಡಲಾಗಿದೆ? ವಿಶ್ಲೇಷಿಸಿ.

2) ಹೆಣ್ಣಿನ ಮನದ ಆಸೆ-ಆಕಾಂಕ್ಷೆಗಳನ್ನು, ಅವರ ಬದಲಾಗುವ ನಿಲುವನ್ನು ಮಂಥರೆ ಮತ್ತು ಕೈಕೆಯಿ ಪಾತ್ರಗಳ ಮೂಲಕ ನಾಟಕ ಹೇಗೆ ಅನಾವರಣಗೊಳಿಸುತ್ತದೆ? ವಿವೇಚಿಸಿ.

ಆ) <u>ಒಂದು</u> ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. 1x6=6

1) ಭರತನ ಪಾತ್ರವನ್ನು ನಾಟಕದಲ್ಲಿ ಹೇಗೆ ಚಿತ್ರಿಸಲಾಗಿದೆ? ವಿವರಿಸಿ.

2) ನಾಟಕದಲ್ಲಿ ದಶರಥ ಮತ್ತು ಕೈಕೆಯಿ ಇವರ ಸಂಭಾಷಣೆಯ ಮಹತ್ವ ಏನು ವಿವರಿಸಿ.

ಇ) ಒಂದಕ್ಕೆ ಟಿಪ್ಪಣಿ ಬರೆಯಿರಿ. 1x3=3

1) ಎಚ್.ಎಸ್. ವೆಂಕಟೇಶ್ ಮೂರ್ತಿ

2) ಭರತ

IV. ಅ) <u>ಎರಡಕ್ಕೆ</u> ಟಿಪ್ಪಣಿ ಬರೆಯಿರಿ. 2x3=6

1) ದುಂಡಿರಾಜ್

2) ಸತೀಶ್ ಕುಲಕರ್ಣಿ

3) ಪೂರ್ಣಚಂದ್ರ ತೇಜಸ್ವಿ

ಆ) <u>ಒಂದು</u> ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ. 1x5=5

1) ಗುಡುಗಿನ ನಾರಣಪ್ಪನ ಕಾವ್ಯನಾಮವೇನು?

2) ಶಿಶುನಾಳ ಶರೀಫರ ಗುರುವಿನ ಹೆಸರೇನು?

3) ಭೂಮಿಗೀತ ಯಾರ ಕವನ ಸಂಕಲನ?

4) ಕನ್ನಡ ಮೌಲ್ವಿ ಪ್ರಬಂಧವನ್ನು ಯಾವ ಕೃತಿಯಿಂದ ಆರಿಸಲಾಗಿದೆ?

5) ಮಂಥರೆ ನಾಟಕವನ್ನು ಬರೆದವರು ಯಾರು?

******************

 Reg. No. ...................................

ಕ್ರೆಡಿಟ್ ಆಧಾರಿತ ದ್ವಿತೀಯ ಸೆಮಿಸ್ಟರ್ ಬಿ.ಎ./ಬಿ.ಎಸ್‌ಡಬ್ಲ್ಯು ಪದವಿ ಪರೀಕ್ಷೆ ಏಪ್ರಿಲ್ 2012

ಕನ್ನಡ ಭಾಷಾ ಪತ್ರಿಕೆ

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 70

I. ಅ) ಒಂದು ಪದ್ಯಭಾಗಗಳಲ್ಲಿ ಒಂದರ ಭಾವಾರ್ಥ ಬರೆಯಿರಿ. 1x5=5

1) ಜಂಬುಕಂ ಜನಿಸುವುದೆ ಸಿಂಗದುದರದೊಳಕಟ
ಹೆಂಬೇಡಿ ನೀನೆಲವೊ ಕುಲಗೇಡಿ ತನ್ನ ಬಸಿ
ರಿಂ ಬಂದವನೆ ಖೂಳ ಕುದುರೆಯಂ ಕಾದದೇತಕೆ ತಂದೆ ಪಂದೆ ನಿನಗೆ
ಡೊಂಬಿನ ಚತುರ್ಬಲವಿದೇಕೆ ಭೂಪಾಲರಾ
ಡಂಬರದ ಛತ್ರ ಚಮರಂಗಳೇತಕೆ ಬಯಲ
ಡಂಬಕದ ಕೈದುಗಳೇಕೆ ಸುಡು ಬಿಡು ಜೀವವಾಸೆಯುಂ ಪೋಗೆಂದನು

2) ಹೆಂಗಳ ರೂಪು ಗಂಡರಿಗೆ ಗಂಡರ ರೂಪು।
ಹೆಂಗಳ ಸೋಲಿಪ್ಪುದೆಂಬ॥
ಪಾಂಗಲ್ಲವವನ ಚೆಲ್ವಿಕೆ ಗಂಡು ಪೆಣ್ಗಳ।
ಕಂಗಳ ಸೆರೆವಿಡಿದಿಹುದು॥

ಆ) ಕೆಳಗಿನ ಸಾಲುಗಳಲ್ಲಿ ಎರಡರ ಸಂದರ್ಭವನ್ನು ವಿವರಿಸಿರಿ. 2x3=6

1) ಅಮೃತಕೆ ಸಮುದ್ರಮಂ ಮಥಿಸೆ ವಿಷಮುದಿಸಿದವೊಲಾಯ್ತು
2) ಕೆಂಪಲ್ಲವೆ ನಮ್ಮ ರಕುತ ಕೆಂಪಲ್ಲವೆ?
3) ಎಷ್ಟಾದರೂ ಅರಣ್ಯವಾಸಿಯಲ್ಲವೇ ನೀನು?

ಇ) ಒಂದು ಪ್ರಶ್ನೆಗೆ ಉತ್ತರಿಸಿ. 1x8=8

1) ಬಭ್ರುವಾಹನ-ಅರ್ಜುನರ ನಡುವಣ ಕಾಳಗದ ಕಾರಣ ಹಾಗೂ ಪರಿಣಾಮವನ್ನು ಸ್ವಾರಸ್ಯ ಕೆಡದಂತೆ ಸಂಗ್ರಹಿಸಿ ಬರೆಯಿರಿ.
2) ಭರತೇಶನ ವ್ಯಕ್ತಿತ್ವವನ್ನು ರತ್ನಾಕರವರ್ಣಿ ಹೇಗೆ ನಿರೂಪಿಸಿದ್ದಾನೆ? ವಿವರಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. 1x5=5

1) ಮಾಪೋತ್ಸೈತುಂಗನ ಏಳು-ಬೀಳುಗಳು ಕವನದಲ್ಲಿ ಹೇಗೆ ಮೂಡಿಬಂದಿವೆ?
2) 'ಮಾದಿಗರ ಹುಡುಗಿ'-ಕವನದ ಆಶಯವೇನು? ಅದು ಹೇಗೆ ವ್ಯಕ್ತವಾಗಿದೆ?

II. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ. 1x8=8

1) ಹಲ್ಲಿಯ ಬಗೆಗಿನ ಪಂಜೆಯವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆಯಿರಿ.
2) ನಮ್ಮಲ್ಲಿ ಅಪಾರ ಶಕ್ತಿ ಇದೆ ಎಂಬುದನ್ನು ಲೇಖಕರು ಹೇಗೆ ಪ್ರತಿಪಾದಿಸಿದ್ದಾರೆ?

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. 1x5=5

1) ಬೇಕಲ ರಾಮನಾಯಕರ ಕಥಾನಕದ ರಾಯಪ್ಪ ನಾಯಕ ತೊಟ್ಟ ಭಾಷೆಯನ್ನು ಹೇಗೆ ಈಡೇರಿಸಿಕೊಂಡ? ವಿವರಿಸಿರಿ.
2) ನಿಮ್ಮ ಮೆಚ್ಚಿನ ಒಬ್ಬಳು ಸಾಧಕಿಯನ್ನು ಕುರಿತು ಪರಿಚಯಿಸಿರಿ.

III. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ.

1) ಹೆಣ್ಣಿನ ಅಂತರಂಗದ ತುಮುಲ, ಆಸೆ, ಆಕಾಂಕ್ಷೆಗಳು 'ಮಂಥರೆ'-ನಾಟಕದಲ್ಲಿ ಹೇಗೆ ಅನಾವರಣ ವಿವರಿಸಿರಿ.

2) ಮಂಥರೆ ಪಾತ್ರವನ್ನು ಪರಿಚಯಿಸಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1) ಭರತನ ಪಾತ್ರ ನಾಟಕದಲ್ಲಿ ಹೇಗೆ ಮೂಡಿಬಂದಿದೆ?

2) ಕೈಕೆ-ದಶರಥರ ನಡುವಣ ಸಂವಾದವನ್ನು ಸಂಗ್ರಹಿಸಿ ಬರೆಯಿರಿ.

IV. ಅ) ಒಂದು ಪ್ರಶ್ನೆಗೆ ಉತ್ತರಿಸಿ. 1

1) ಆಡಳಿತ ಪತ್ರದ ಪ್ರಮುಖ ಅಂಗಗಳಾವುವು? ವಿವರಿಸಿರಿ.

2) ಅರೆ ಸರಕಾರಿ ಪತ್ರವನ್ನು ಮಾದರಿ ಸಹಿತ ಪರಿಚಯಿಸಿರಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. 1

1) ಸುತ್ತೋಲೆ ಎಂದರೇನು?

2) ಬಹುಭಾಷಿಕ ನಿಘಂಟು ಎಂದರೇನು?

V. ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ. 2

1) ಸಂಜೀವಿನಿ

2) ಚಂದ್ರಶೇಖರ ಕಂಬಾರ

3. ಷಟ್ಪದಿ

ಆ) ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. 1

1) ಲಕ್ಷ್ಮೀಶನ ಕೃತಿಯ ಹೆಸರೇನು?

2) ಜಂಬುಕ ಎಂದರೇನು?

3) ಪ್ರಿಯಂವದೆ ಯಾರು?

4) 'ಕವಿಶಿಷ್ಯ'-ಯಾರ ಕಾವ್ಯನಾಮ?

5) 'ಮೈಸೂರಿನ ಹುಲಿ'-ಬಿರುದಾಂಕಿತ ಯಾರು?

*****************